
# ಶಾಂತಿದೂತ ಗುರುನಾನಕ್

ಸ್ವಾಮಿ ರಾಘವೇಶಾನಂದ

**ಪ್ರ**ತಿ ವರ್ಷ ಸಿಖ್ಖರು ಶ್ರೀಗುರುನಾನಕರ ಜನ್ಮದಿನವನ್ನು ಸಂಭ್ರಮದಿಂದ ಆಚರಿಸುತ್ತಾರೆ. ಇವರು ಸಿಖ್ ಧರ್ಮದ ಸಂಸ್ಥಾಪಕರು. ಸಾಧಾರಣವಾಗಿ ಇವರ ಜನ್ಮದಿನ ಅಕ್ಟೋಬರ್ – ನವೆಂಬರ್‌ನಲ್ಲಿ ಪೂರ್ಣಿಮೆಯಂದು ಬರುತ್ತದೆ.

ನಾನಕರು ಪಶ್ಚಿಮ ಪಂಜಾಬಿನ ತಲವಂಡಿ ಎಂಬ ಗ್ರಾಮದಲ್ಲಿ ೧೪೬೯ ರ ನವೆಂಬರ್ ತಿಂಗಳ ಪೂರ್ಣಿಮೆಯಂದು ಜನಿಸಿದರು. ಈಗ ಇದು ಪಾಕಿಸ್ತಾನಕ್ಕೆ ಸೇರಿದೆ. ಇವರು ಮೆಹ್ತಾ ಕಲ್ಯಾಣ್ ದಾಸ್ ಮತ್ತು ಕೃಪ್ತಾಜಿ ಎಂಬ ದಂಪತಿಗಳಿಗೆ ಎರಡನೆಯ ಮಗುವಾಗಿ ಹುಟ್ಟಿದರು. ಹಿಂದೂ–ಮುಸ್ಲಿಮರಲ್ಲಿ ಅತೀವ ವೈಮನಸ್ಯವಿದ್ದ ಕಾಲವದು. ಈ ಎರಡು ಮತಗಳವರೂ ತಮ್ಮ ಶಾಸ್ತ್ರಗಳನ್ನೂ ಅದರಲ್ಲಿ ಹೇಳಿರುವ ಸೋದರತ್ವ ಭಾವವನ್ನೂ ಸಂಪೂರ್ಣವಾಗಿ ಮರೆತು, ಒಬ್ಬರ ಮೇಲೆ ಮತ್ತೊಬ್ಬರು ಕತ್ತಿ ಮಸೆಯುವುದರಲ್ಲೇ ನಿರತರಾಗಿದ್ದರು. ಬಾಲ್ಯದಿಂದಲೇ ಗುರುನಾನಕರಿಗೆ ತತ್ತ್ವಶಾಸ್ತ್ರ ಹಾಗೂ ಅಧ್ಯಾತ್ಮದಲ್ಲಿ ತೀವ್ರ ಆಸಕ್ತಿಯಿತ್ತು. ಬಾಲ್ಯದಿಂದಲೇ ಅವರು ಹಿಂದೂಗಳು ಮತ್ತು ಮುಸ್ಲಿಮರೊಡನೆ ಅನ್ಯೋನ್ಯದಿಂದಿದ್ದರು. ಮತಭೇದಗಳನ್ನು ಲೆಕ್ಕಿಸದೆ, ಒಟ್ಟು ಜೀವನದ ಅರ್ಥವನ್ನು ಕಂಡುಹಿಡಿಯುವುದರಲ್ಲಿ ಆಸಕ್ತರಾಗಿದ್ದರು.

ಗುರುನಾನಕರು ತಮ್ಮ ಏಳನೆಯ ವಯಸ್ಸಿನಲ್ಲಿ ಪಾಠಶಾಲೆಯನ್ನು ಸೇರಿದರು. ಅವರ ಉಪಾಧ್ಯಾಯರು ಮೊದಲು ಅವರಿಗೆ ಅಕ್ಷರಗಳನ್ನು ಕಲಿಸಿದರು. ಆದರೆ ಆ ಮೊದಲ ಅಕ್ಷರಗಳ ಅರ್ಥವೇನು ಎಂದು ಕೇಳಿ ನಾನಕರು ಉಪಾಧ್ಯಾಯರನ್ನೇ ಚಕಿತಗೊಳಿಸಿದರು. ಯಾವ ಉಪಾಧ್ಯಾಯರು ತಾನೇ ಇಂತಹ ಪ್ರಶ್ನೆಯನ್ನು ಎದುರುನೋಡಿರುತ್ತಾರೆ? ಅಷ್ಟೇ ಅಲ್ಲ, ಅವರ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡ ಬಾಲಕ ನಾನಕ್ ಉಪಾಧ್ಯಾಯರು ಹೇಳಿಕೊಟ್ಟ ಪ್ರತಿ ಅಕ್ಷರದ ಅರ್ಥವನ್ನೂ ತಾನೇ ವಿವರಿಸಿದ. ಈ ಘಟನೆಯನ್ನು ಗುರುನಾನಕರ ಪ್ರಥಮ ಸಂದೇಶ ಎಂದು ಸಿಖ್ ಭಕ್ತರು ಪರಿಗಣಿಸುತ್ತಾರೆ. ಅವರ ಪ್ರಕಾರ, ಈ ಅಕ್ಷರಗಳು ಮನುಷ್ಯರ ಹಾಗೂ ಭಗವಂತನ ಬಗ್ಗೆ ಆಳವಾದ ಅರ್ಥವನ್ನು ತಿಳಿಸುತ್ತವೆ; ಈ ಅಕ್ಷರಗಳಿಂದ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವ ವಿಧಾನವನ್ನು ತಿಳಿಯಬಹುದು. ಈ ವ್ಯಾಖ್ಯಾನದಿಂದ ಚಕಿತಗೊಂಡ ಉಪಾಧ್ಯಾಯರು ಈ ಶಿಷ್ಯನನ್ನು ಅವರ ತಂದೆಯ ಬಳಿಗೆ ಕರೆದು



ಕೊಂಡು ಹೋಗಿ ಹೀಗೆ ಹೇಳಿದರು: "ಮೆಹ್ತಾಜಿ, ನಿಮ್ಮ ಮಗ ಸಾಮಾನ್ಯನಲ್ಲ. ಇವನೊಬ್ಬ ಅವತಾರಪುರುಷ. ಕಲಿಯುಗದ ಜನರಿಗೆ ಮುಕ್ತಿಮಾರ್ಗ ತೋರಿಸಲು ಬಂದಿದ್ದಾನೆ. ಇವನು ಜಗದ್ಗುರುವಾಗುವುದರಲ್ಲಿ ಸಂದೇಹವಿಲ್ಲ. ಇವನಿಗೆ ನಾನು ಕಲಿಸಬೇಕಾದುದು ಏನೂ ಇಲ್ಲ".

ಆದರೂ ನಾನಕ್ ಶಾಲೆಗೆ ಹೋಗುವುದನ್ನು ನಿಲ್ಲಿಸಲಿಲ್ಲ. ಅವರು ಹಿಂದಿ, ಸಂಸ್ಕೃತ, ಪಾರ್ಸಿ ಮತ್ತು ಅರೇಬಿಕ್ ಭಾಷೆಗಳನ್ನು ಬಾಲ್ಯದಲ್ಲಿಯೇ ಕಲಿತರು; ಬೆಳೆದಂತೆಲ್ಲಾ ಹಿಂದೂಧರ್ಮದ ತತ್ತ್ವಗಳನ್ನು, ಮುಸ್ಲಿಂ ಧರ್ಮದ ತಿರುಳನ್ನು ಚೆನ್ನಾಗಿ ಅಭ್ಯಾಸ ಮಾಡಿದರು. ಅವರಿಗೆ ೧೩ ವರ್ಷ ವಯಸ್ಸಾದಾಗ ಸಾಂಪ್ರದಾಯಿಕವಾಗಿ ಉಪನಯನ ಮಾಡಬೇಕೆಂದು ಹಿರಿಯರು ನಿರ್ಧರಿಸಿದರು; ಆದರೆ ನಾನಕ್ ಇಂತಹ ಸಂಸ್ಕಾರಗಳಲ್ಲಿ ತಮಗೆ ನಂಬಿಕೆಯಿಲ್ಲವೆಂದು ಅದನ್ನು ತಿರಸ್ಕರಿಸಿದರು.

ಒಂದು ದಿನ ನಾನಕರಿಗೆ, ಅವರ ತಂದೆ ಮೂವತ್ತು ರೂಪಾಯಿ ಕೊಟ್ಟು, ಏನಾದರೂ ವ್ಯಾಪಾರ ಮಾಡಲು ಹೇಳಿದರು. ನಾನಕ್ ಆ ಹಣದಿಂದ ಆಹಾರ ವಸ್ತುಗಳನ್ನು ಕೊಂಡು ತಂದು, ಅದನ್ನು ಬಡಬಗ್ಗರಿಗೆ ಹಂಚಿದರು. ಅವರ ತಂದೆ ಅವರನ್ನು ಹಣವನ್ನು ಏನು ಮಾಡಿದೆ ಎಂದು ಕೇಳಿದಾಗ, "ನಾನು ನಿಜವಾದ ವ್ಯಾಪಾರ ಮಾಡಿದೆ" ಎಂದು ಉತ್ತರಿಸಿದರು.

ಪೂಜ್ಯ ಸ್ವಾಮೀಜಿಯವರು ಬೆಳಗಾವಿಯ ರಾಮಕೃಷ್ಣ ಮಿಷನ್ನಿನ ಮುಖ್ಯಸ್ಥರು; ಉತ್ತಮ ವಾಗ್ಮಿಗಳು ಮತ್ತು ಬರಹಗಾರರು. ಇವರ ಅನೇಕ ಪುಸ್ತಕಗಳು ಪ್ರಕಟವಾಗಿವೆ.

ನಾನಕರು ತಮ್ಮ ಹಳ್ಳಿಯ ಸಮೀಪದಲ್ಲಿರುವ ಕಾಡಿಗೆ ಹೋಗಿ ಏಕಾಂತದಲ್ಲಿ ಗಂಟೆಗಟ್ಟಲೆ ಧ್ಯಾನ ಮಾಡುತ್ತಿದ್ದರು. ಆ ಪ್ರದೇಶದ ಹಿಂದೂ ಹಾಗೂ ಮುಸ್ಲಿಂ ಪಂಗಡಗಳಿಗೆ ಸೇರಿದ ಮಹಾತ್ಮರ ಜೊತೆ ದೀರ್ಘಕಾಲ ಆಧ್ಯಾತ್ಮಿಕ ವಿಷಯಗಳ ಬಗ್ಗೆ ಚರ್ಚಿಸುತ್ತಿದ್ದರು.

ಹೀಗೆ ಕಾಲಕಳೆಯುತ್ತಿರುವ ಮಗನನ್ನು ನೋಡಿ, ತಂದೆ ಅವರನ್ನು ಲೌಕಿಕತೆಯತ್ತ ಎಳೆತರಲು, ಅವರಿಗೆ ಮದುವೆ ಮಾಡಲು ತೀರ್ಮಾನಿಸಿದರು. ವಿವಾಹ ತಮ್ಮ ಆಧ್ಯಾತ್ಮಿಕ ಜೀವನಕ್ಕೆ ಯಾವ ತಡೆಯನ್ನೂ ಒಡ್ಡದೆಂದು ಗುರುನಾನಕರು ಮದುವೆಗೆ ಒಪ್ಪಿದರು. ತಮ್ಮ ಹೆಂಡತಿಯನ್ನು ಚೆನ್ನಾಗಿ ನೋಡಿಕೊಂಡರು. ಶ್ರೀಚಂದ್ ಮತ್ತು ಲಕ್ಷ್ಮೀಚಂದ್ ಎಂಬ ಇಬ್ಬರು ಗಂಡು ಮಕ್ಕಳ ತಂದೆಯಾದರು. ಸಂಸಾರ ಹೂಡಿದ ಮಾತ್ರಕ್ಕೆ ಆಧ್ಯಾತ್ಮಿಕತೆಯಿಂದೇನೂ ಅವರು ವಿಮುಖರಾಗಲಿಲ್ಲ. ಆದರೆ, ತಮ್ಮ ಕುಟುಂಬಕ್ಕಷ್ಟೇ ತಮ್ಮ ಜೀವನ ಸೀಮಿತವಾಗಿರದೆ, ಇಡೀ ಮಾನವತೆಯ ಸೇವೆ ಮಾಡುವುದೇ ತಮ್ಮ ಕರ್ತವ್ಯವೆಂದು ಅವರು ಭಾವಿಸಿದರು. ಸಂಸಾರವನ್ನು ಕಾಪಾಡಬೇಕಾದ್ದರಿಂದ ಯಾವುದಾದರೂ ಕೆಲಸಕ್ಕೆ ಸೇರಿ ಹಣವನ್ನು ಸಂಪಾದಿಸಬೇಕೆಂದು ಅವರ ಮನೆಯವರು ಅವರನ್ನು ಒತ್ತಾಯಿಸಿದರು. ಅಂತೆಯೇ ಸುಲ್ತಾನ್‌ಪುರದ ರಾಜ್ಯಪಾಲರ ಕೈಕೆಳಗಿದ್ದ ಒಂದು ಅಂಗಡಿಯಲ್ಲಿ ಅವರು ಲೆಕ್ಕಪತ್ರಗಳನ್ನು ನೋಡಿಕೊಳ್ಳುವ ಕೆಲಸಕ್ಕೆ ಸೇರಿದರು.

ಗುರುನಾನಕರಿಗೆ ಮರ್ದಾನ ಎಂಬ ಸ್ನೇಹಿತನೊಬ್ಬನಿದ್ದ. ಅವನೊಬ್ಬ ಸಂಗೀತಗಾರ. ಅವನು ರುಬಾಬ್ ಎಂಬ ತಂತಿ ವಾದ್ಯವನ್ನು ನುಡಿಸುತ್ತಿದ್ದ. ಅವನೊಡನೆ ನಾನಕರು ಬೆಳಿಗ್ಗೆ ಹಾಗೂ ರಾತ್ರಿ ದೇವರ ಸ್ತೋತ್ರಗಳನ್ನು ಹಾಡುತ್ತಾ, ಧ್ಯಾನ ಮಾಡುತ್ತಾ ಕಾಲ ಕಳೆಯಲಾರಂಭಿಸಿದರು. ಒಂದು ದಿನ ಬೆಳಿಗ್ಗೆ ನಾನಕರು ಮರ್ದಾನನ ಜೊತೆಯಲ್ಲಿ ಸ್ನಾನ ಮಾಡಲು ನದಿಗೆ ಹೋದರು. ನೀರಿನಲ್ಲಿ ಮುಳುಗಿದ ಮೇಲೆ, ಬಹಳ ಕಾಲದವರೆಗೆ ಮೇಲೇಳಲೇ ಇಲ್ಲ. ಗಾಬರಿಗೊಂಡ ಮರ್ದಾನ ಅವರ ಮನೆಯವರಿಗೆ ತಿಳಿಸಿದ. ಹಳ್ಳಿಯವರೆಲ್ಲಾ ಬಂದು ನದಿಗೆ ಇಳಿದು, ತುಂಬಾ ಹುಡುಕಿದರೂ ಗುರುನಾನಕರು ಸಿಗಲಿಲ್ಲ. ಎಲ್ಲರೂ ದುಃಖದಿಂದ ಹಿಂದಿರುಗಿದರು. ಮೂರು ದಿನಗಳ ನಂತರ ನದಿಯಲ್ಲಿ ಅದೇ ಜಾಗದಲ್ಲಿ ಮತ್ತೆ ಮೇಲೆದ್ದು ಬಂದರು. ಈ ಪವಾಡವನ್ನು ನೋಡಿ ಎಲ್ಲರೂ ಆಶ್ಚರ್ಯಗೊಂಡರು. ಆದರೆ ಅವರು ಮೊದಲಿನಂತಿರಲಿಲ್ಲ. ಅವರ ಕಣ್ಣುಗಳಲ್ಲಿ ದಿವ್ಯಜ್ಯೋತಿಯಿತ್ತು; ಮುಖವೆಲ್ಲ ಕಾಂತಿಮಯ ವಾಗಿತ್ತು; ಯಾವುದೋ ಸಮಾಧಿಸ್ಥಿತಿಯಲ್ಲಿದ್ದರು; ಹೆಚ್ಚು ಮಾತ ನಾಡುತ್ತಿರಲಿಲ್ಲ. ಮತ್ತೆ ನಾನಕರು ಕೆಲಸಕ್ಕೆ ಹೋಗಲಿಲ್ಲ. ತಮ್ಮಲ್ಲಿದ್ದುದೆಲ್ಲವನ್ನೂ ಬಡಬಗ್ಗರಿಗೆ ಹಂಚಿ ಫಕೀರರಾದರು. ಅವರು ಮೌನವನ್ನು ಮುರಿದಾಗ ಹೀಗೆ ಹೇಳಿದರು, "ಹಿಂದೂ ಎನ್ನುವವನಿಲ್ಲ, ಮುಸ್ಲಿಂ ಎನ್ನುವವನಿಲ್ಲ."

ತಮ್ಮ ೩೦ ನೇ ವಯಸ್ಸಿನಲ್ಲಿ ದೇವರ ಸಂದೇಶವನ್ನು ಹರಡಲು ಗುರುನಾನಕರು ತೀರ್ಥಯಾತ್ರೆ ಹೊರಟರು. ಮರ್ದಾನನನ್ನು ತಮ್ಮ ಜೊತೆಯಲ್ಲಿ ಸೇರಿಸಿಕೊಂಡರು. ರಾಗವಾಗಿ ಹಾಡುತ್ತಿದ್ದ ಸರಳವಾದ ಗೀತೆಗಳ ಮೂಲಕ ತಮ್ಮ ಸಂದೇಶವನ್ನು ಹರಡುತ್ತಿದ್ದರು. ಜನರೆಲ್ಲರಿಗೂ ಇದನ್ನು ನೆನಪಿನಲ್ಲಿಟ್ಟುಕೊಳ್ಳುವುದಕ್ಕೂ, ಹಾಡು ವುದಕ್ಕೂ ಸುಲಭವಾಗಿದ್ದರಿಂದ ಈ ಮಾಧ್ಯಮವನ್ನು ಅವರು ಆರಿಸಿಕೊಂಡರು. ಹೋದಲ್ಲೆಲ್ಲಾ ಆ ಸ್ಥಳದ ಭಾಷೆಯ ಮೂಲಕವೇ ನಾನಕರು ಉಪದೇಶಿಸುತ್ತಿದ್ದರು.

ಗುರುನಾನಕರು ಬಹಳ ಕಡೆ ಪ್ರಯಾಣ ಮಾಡಿದರು. ಹೋದಲ್ಲೆಲ್ಲಾ ಜನಸಂದಣಿ ಇವರನ್ನು ಅನುಸರಿಸುತ್ತಿತ್ತು. 'ಮುಂಜಿ' ಎಂದು ಕರೆಯುವ ಗುಹೆಯ ಆಕಾರದ ಮಂದಿರಗಳನ್ನು ರಚಿಸಿ, ಅಲ್ಲಿ ತಮ್ಮ ಅನುಯಾಯಿಗಳೊಡನೆ ಧ್ಯಾನ ಹಾಗೂ ಕೀರ್ತನೆಗಳಲ್ಲಿ ಕಾಲ ಕಳೆಯುತ್ತಿದ್ದರು. ಅವರ ಯಾತ್ರೆಯ ಕಾಲದಲ್ಲಿ ಅನೇಕ ಕುತೂಹಲಕಾರಿಯಾದ ಘಟನೆಗಳು ನಡೆಯುತ್ತಿದ್ದವು.

ಒಂದು ಕಥೆ ಹೀಗಿದೆ. ಒಮ್ಮೆ ಅವರು ಹರಿದ್ವಾರಕ್ಕೆ ಹೋದಾಗ ಅಲ್ಲಿ ಪವಿತ್ರಗಂಗೆಯಲ್ಲಿ ನೂರಾರು ಜನರು ಸ್ನಾನ ಮಾಡುತ್ತಿದ್ದುದನ್ನು ಕಂಡರು. ಅವರು ಸ್ನಾನ ಮುಗಿಸಿ, ಪೂರ್ವ ದಿಕ್ಕಿನೆಡೆ ಮುಖಮಾಡಿ, ಸೂರ್ಯನನ್ನು ಪ್ರಾರ್ಥಿಸುತ್ತ ತಮ್ಮ ಪಿತೃಗಳಿಗೆ ತರ್ಪಣ ಕೊಡುತ್ತಿದ್ದರು. ಅದನ್ನು ನೋಡಿ ಗುರು ನಾನಕರು ತಾವು ಸಹ ನೀರನ್ನು ಕೈಯಲ್ಲಿ ತೆಗೆದುಕೊಂಡು ವಿರುದ್ಧ ದಿಕ್ಕಿನಲ್ಲಿ ಎರಚಲಾರಂಭಿಸಿದರು. ಅದನ್ನು ಕಂಡು ಆಶ್ಚರ್ಯದಿಂದ ಭಕ್ತರು ಇವರನ್ನು "ಇದೇನು ಮಾಡುತ್ತಿದ್ದೀರಿ?" ಎಂದು ಪ್ರಶ್ನಿಸಿದರು. ಅದಕ್ಕೆ ಅವರು "ಆ ದಿಕ್ಕಿನಲ್ಲಿ ನನ್ನ ಹೊಲವಿದೆ. ಅಲ್ಲಿಗೆ ನೀರನ್ನು ಕಳಿಸುತ್ತಿದ್ದೇನೆ" ಎಂದರು. ಅದಕ್ಕೆ ಆ ಭಕ್ತರು "ಅಷ್ಟು ದೂರದಲ್ಲಿರುವ ಆ ಹೊಲಕ್ಕೆ ನಿಮ್ಮ ನೀರು ಹೇಗೆ ಹೋಗಿ ಸೇರುತ್ತದೆ?" ಎಂದು ಪ್ರಶ್ನಿಸಿದಾಗ ಗುರುನಾನಕರು ಹೀಗೆ ಉತ್ತರಿಸಿದರು: "ನೀವು ತರ್ಪಣ ಕೊಡುತ್ತಿರುವ ನೀರು ಪಿತೃಲೋಕದಲ್ಲಿರುವ ನಿಮ್ಮ ತಂದೆತಾಯಿಗಳಿಗೆ ಸೇರುವುದಾದರೆ, ನಾನು ಎರಚುತ್ತಿರುವ ನೀರು ಕೆಲವೇ ಮೈಲುಗಳ ದೂರದಲ್ಲಿರುವ ನನ್ನ ಹೊಲವನ್ನು ತಲುಪಲಾರದೆ?" ಹೀಗೆ ಜನರ ಮೂಢನಂಬಿಕೆ ಗಳನ್ನು ಹೋಗಲಾಡಿಸಲು ಗುರುನಾನಕರು ಪ್ರಯತ್ನಿಸಿದರು.

ಭಾರತದ ಪೂರ್ವ ದಿಕ್ಕಿನಲ್ಲಿ ಯಾತ್ರೆ ಹೊರಟ ಗುರು ನಾನಕರು ಗೋರಖ್‌ಪುರ ಎಂಬ ಊರಿಗೆ ಬಂದರು. "ನಿಜವಾದ ತಪಸ್ಸು ಎಂದರೆ ಏನು?" ಎಂಬುದರ ಬಗ್ಗೆ ಅಲ್ಲಿಯ ಕೆಲವು ಯೋಗಿಗಳೊಡನೆ ಚರ್ಚಿಸಿದರು. ಗುರುನಾನಕರು ಅವರಿಗೆ ಹೀಗೆ ಹೇಳಿದರು: "ತಪಸ್ಸು ಉಡುವ ಬಟ್ಟೆಯಲ್ಲಾಗಲಿ, ಕೈಯಲ್ಲಿ ಹಿಡಿಯುವ ದಂಡದಲ್ಲಾಗಲಿ ಅಥವಾ ಮೈಗೆಲ್ಲಾ ಬೂದಿ ಬಳಿದು ಕೊಳ್ಳುವುದರಲ್ಲಾಗಲಿ ಇಲ್ಲ. ಅಥವಾ ಅದು ಕಿವಿಯಲ್ಲಿರುವ ಬಳೆಯಲ್ಲೋ, ತಲೆಯನ್ನು ಮುಂಡನ ಮಾಡಿಸಿಕೊಳ್ಳುವುದ ರಲ್ಲೋ, ಶಂಖ ಊದುವುದರಲ್ಲೋ ಇಲ್ಲ. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಯಾತ್ರೆ ಹೋಗುವುದರಲ್ಲೋ, ತಣ್ಣೀರಿನಲ್ಲಿ ಸ್ನಾನ ಮಾಡುವುದರಲ್ಲೋ ಇಲ್ಲ. **ಅದಕ್ಕೆ ಬದಲಾಗಿ ಅಪವಿತ್ರತೆಗಳ ಮಧ್ಯೆ ಇದ್ದುಕೊಂಡೂ ಪವಿತ್ರ ಜೀವನ ನಡೆಸುವುದೇ ತಪಸ್ಸು**".

ಸುಮಾರು ೧೨ ವರ್ಷಗಳ  ಕಾಲ ಹಲವಾರು ಕಡೆ ಧರ್ಮ ಪ್ರಚಾರ ಮಾಡಿದ  ಗುರುನಾನಕರು   ಮನೆಗೆ ಬಂದರು. ಸ್ವಲ್ಪ ದಿನಗಳಾದ ಮೇಲೆ ಮತ್ತೆ ದಕ್ಷಿಣ ದಿಕ್ಕಿನಲ್ಲಿ, ಶ್ರೀಲಂಕೆಯವರೆಗೆ ಪ್ರಯಾಣ ಮಾಡಿದರು. ಅಲ್ಲಿಂದ ಹಿಂದಿರುಗಿದ ಮೇಲೆ ಪಂಜಾಬಿನ ರಾವಿ ನದಿಯ ಪಶ್ಚಿಮ ತೀರದಲ್ಲಿ 'ಕರ್ತಾರ್‌ಪುರ್' ಅಂದರೆ 'ದೇವರ ಮನೆ' ಎಂಬ ಒಂದು ಸ್ಥಾನವನ್ನು ನಿರ್ಮಿಸಿದರು.

ತಮ್ಮ ಮೂರನೆಯ ಯಾತ್ರೆಯಲ್ಲಿ  ಗುರುನಾನಕರು ಉತ್ತರ ದಿಕ್ಕಿನಲ್ಲಿ, ಟಿಬೆಟ್‌ವರೆಗೆ ಸಂಚರಿಸಿದರು. ಅವರು ಸಂಚಾರ ಮಾಡುವಾಗಲೆಲ್ಲಾ ಹಿಂದೂ ಸಂತರು ಹಾಗೂ ಮುಸ್ಲಿಂ ಸಂತರು ಧರಿಸುತ್ತಿದ್ದ ಉಡುಪುಗಳ ಶೈಲಿಗಳೆರಡೂ ಬೆರೆತ ಉಡುಗೆಯನ್ನು ಧರಿಸುತ್ತಿದ್ದರು. ಆದ್ದರಿಂದ ಹಲವಾರು ಜನ, "ನೀವು ಹಿಂದೂಗಳೇ ಅಥವಾ ಮುಸ್ಲಿಮರೇ?" ಎಂದು ಅವರನ್ನು ಪ್ರಶ್ನಿಸುತ್ತಿದ್ದರು.

ತಮ್ಮ ನಾಲ್ಕನೆಯ ಯಾತ್ರೆಯಲ್ಲಿ ಮುಸ್ಲಿಮರಂತೆ ನೀಲಿ ಬಣ್ಣದ ಉಡುಪು ಧರಿಸಿ ಮೆಕ್ಕಾ, ಮದೀನಾ ಹಾಗೂ ಬಾಗ್ದಾದ್‌ಗಳಿಗೆ ಹೋದರು. ಮೆಕ್ಕಾದಲ್ಲಿ ಪವಿತ್ರ ಶಿಲೆಯಾದ ಕಾಬಾದ ದಿಕ್ಕಿನಲ್ಲಿ ಕಾಲು ಹಾಕಿ ಮಲಗಿದರು. ಒಬ್ಬ ಕಾವಲುಗಾರ ಅದನ್ನು ಗಮನಿಸಿ, ಅವರನ್ನು ಮೇಲೆಬ್ಬಿಸಿ, "ನಿನಗೆ ಎಷ್ಟು ಅಹಂಕಾರ? ದೇವರೆಡೆಗೆ ಕಾಲು ಹಾಕಿ ಮಲಗಿರುವೆಯಲ್ಲ?" ಎಂದು ಪ್ರಶ್ನಿಸಿದನು. ಗುರು ನಾನಕರು ಎದ್ದು ಹೇಳಿದರು, "ನಾನು ಬಹು ದೂರ ಪ್ರಯಾಣ ಮಾಡಿದುದರಿಂದ ತುಂಬಾ ಸುಸ್ತಾಗಿದ್ದೇನೆ. ದೇವರು ಯಾವ ದಿಕ್ಕಿನಲ್ಲಿ ಇಲ್ಲವೋ ಆ ದಿಕ್ಕಿಗೆ ದಯವಿಟ್ಟು ನನ್ನ ಕಾಲನ್ನು ತಿರುಗಿಸು."  ದೇವರು ಯಾವ ದಿಕ್ಕಿನಲ್ಲಿ ತಾನೆ ಇಲ್ಲ!

ಎಲ್ಲೆಡೆ ಸುತ್ತಿ ಬಂದ  ಮೇಲೆ, ಗುರುನಾನಕರು  ತಮ್ಮ ಸ್ವಂತ ಪ್ರಾಂತ್ಯವಾದ ಪಂಜಾಬಿಗೆ ಹಿಂದಿರುಗಿದರು. ತಮ್ಮ ಹೆಂಡತಿ ಮಕ್ಕಳೊಡನೆ ಕರ್ತಾರ್‌ಪುರದಲ್ಲಿ ನೆಲೆಸಿದರು. ದೂರ ದೂರದಿಂದ ಭಕ್ತರು ಇವರ ದರ್ಶನ ಮಾಡಲು, ಪ್ರವಚನ ಕೇಳಲು ಬರಲಾರಂಭಿಸಿದರು. ಇಲ್ಲಿ ಅವರ ಅನುಯಾಯಿಗಳು ಬೆಳಗ್ಗೆ, ಮಧ್ಯಾಹ್ನ ಹಾಗೂ ಸಂಜೆ ಸೇರುತ್ತಿದ್ದರು; ಧಾರ್ಮಿಕ ಸೇವಾ ಕಾರ್ಯಗಳಲ್ಲಿ ನಿರತರಾಗುತ್ತಿದ್ದರು. ಜಾತಿ, ಧರ್ಮ ಮತ್ತು ಲಿಂಗ ಭೇದವಿಲ್ಲದ ಸಮಾಜವಿರಬೇಕೆಂದು ಗುರುನಾನಕರು ಆಶಿಸಿದ್ದರು. ಅದಕ್ಕಾಗಿ ಎಲ್ಲರೂ ಸಮಾನತೆಯಿಂದ ಊಟ ಮಾಡುವ 'ಲಂಗರ್' ಎನ್ನುವ ಭೋಜನಶಾಲೆಗಳನ್ನು ಪ್ರಸಿದ್ಧಗೊಳಿಸಿದರು. ಇಲ್ಲಿ  ಯಾವ ಜಾತಿಭೇದವೂ ಇಲ್ಲದೆ, ಎಲ್ಲರೂ ಒಟ್ಟಿಗೆ ಕುಳಿತು ಸಂತೋಷದಿಂದ ಊಟ ಮಾಡುವ ಪದ್ಧತಿಯನ್ನು ಜಾರಿಗೆ ತಂದರು. ಹೀಗೆ  ಗುರು ನಾನಕ್ ಎಲ್ಲಾ ಜಾತಿ ಮತಗಳನ್ನು ತೊಡೆದು ಹಾಕುವ ಸಿಖ್ ಧರ್ಮಕ್ಕೆ ತಳಹದಿಯನ್ನು ಹಾಕಿ, ಇದರ ಪ್ರಥಮ ಗುರುವಾದರು. ತಮಗೆ ಎಪ್ಪತ್ತು ವರ್ಷ ವಯಸ್ಸಾದಾಗ, ಗುರು ಅಂಗದರನ್ನು ತಮ್ಮ ಸ್ಥಾನವನ್ನು ಅಲಂಕರಿಸುವ ಮುಂದಿನ ಗುರುವಾಗಿ ನಾನಕರು ಘೋಷಿಸಿದರು.  ಗುರುನಾನಕರು ಇನ್ನು ಹೆಚ್ಚು ದಿನ ಬದುಕುವುದಿಲ್ಲವೆಂದು ಭಕ್ತರಿಗೆ ಗೊತ್ತಾಯಿತು. ಈ ವಿಷಯ ಹರಡುತ್ತಲೇ ದೇಶದ ನಾನಾ ಭಾಗಗಳಿಂದ ಜನರು ಇವರನ್ನು ದರ್ಶಿಸಲು ಬರಲಾರಂಭಿಸಿದರು. ಅವರಲ್ಲಿ ಹಿಂದೂಗಳು, ಮುಸ್ಲಿಮರು ಇಬ್ಬರೂ ಇದ್ದರು. ಸೆಪ್ಟೆಂಬರ್ ೨೨, ೧೫೩೯ ರಂದು ಗುರು ನಾನಕರು ಹೀಗೆ ಹೇಳಿದರು: "ಹಿಂದೂಗಳು ನನ್ನ ದೇಹದ ಬಲಭಾಗದ ಮೇಲೆ ಪುಷ್ಪಗಳನ್ನು ಅರ್ಪಿಸಲಿ, ಮುಸ್ಲಿಮರು ಎಡಭಾಗದ ಮೇಲೆ ಪುಷ್ಪಗಳನ್ನು ಅರ್ಪಿಸಲಿ. ಯಾವ ಭಾಗದ ಹೂವುಗಳು ಬಾಡದೆ ಇರುವುವೋ, ಆ ಧರ್ಮದವರು ನನ್ನ ದೇಹಕ್ಕೆ, ಅವರ ಧರ್ಮದ ರೀತಿಯಲ್ಲಿ ಶವಸಂಸ್ಕಾರವನ್ನು ನಡೆಸಲಿ".  ಹೀಗೆ ಹೇಳಿ ಗುರುನಾನಕರು ಒಂದು ಬಿಳಿಯ ಬಟ್ಟೆಯನ್ನು ಹೊದ್ದುಕೊಂಡು ಮಲಗಿಬಿಟ್ಟರು. ಮಾರನೆಯ ದಿನ ಬಿಳಿಬಟ್ಟೆಯನ್ನು ತೆಗೆದಾಗ ಅವರ  ದೇಹ ಅಲ್ಲಿರಲಿಲ್ಲ. ಆದರೆ ಎರಡೂ ಧರ್ಮದ ಅನುಯಾಯಿಗಳು ಅರ್ಪಿಸಿದ್ದ ಪುಷ್ಪಗಳು ಬಾಡದೇ ಇದ್ದವು. ಆ ಪುಷ್ಪಗಳನ್ನು ತೆಗೆದು ಆ ಬಟ್ಟೆಯನ್ನು ಉದ್ದಕ್ಕೆ ಎರಡಾಗಿ ಸೀಳಿದರು. ಹಿಂದೂಗಳು ಅವರ ಪಾಲಿನ ಬಟ್ಟೆಯನ್ನು ದಹನ ಮಾಡಿದರು ಮತ್ತು ಮುಸ್ಲಿಮರು ತಮ್ಮ ಪಾಲಿನ ಬಟ್ಟೆಯನ್ನು ವಿಧಿವತ್ತಾಗಿ ಹೂತುಹಾಕಿದರು.  ನಂತರ ಬಂದ ಗುರುಗಳು ಗುರುನಾನಕರ ಉಪದೇಶಗಳ ಮೇಲೆ ಸಿಖ್ ಧರ್ಮವನ್ನು ಕ್ರಮವಾಗಿ ಬೆಳೆಸಿದರು.  ಇಂದು ಸಿಖ್ ಧರ್ಮವು ಜಗತ್ತಿನ ದೊಡ್ಡ ಧರ್ಮಗಳಲ್ಲಿ ಒಂದಾಗಿ ಮನ್ನಣೆ ಪಡೆದಿದೆ.

### ಮುಖಪುಟ ಚಿತ್ರದ ವಿವರಣೆ– ಬುದ್ಧಪೂರ್ಣಿಮಾ

ಬುದ್ಧನ ಜನನ, ಸಂಬೋಧಿಪ್ರಾಪ್ತಿ ಮತ್ತು ಮಹಾನಿರ್ವಾಣ –ಈ ಮೂರೂ ಘಟಿಸಿದ್ದು ವೈಶಾಖ ಪೂರ್ಣಿಮೆಯ ದಿನ. ಹೀಗಾಗಿ, ಈ ದಿನ ಬೌದ್ಧರಿಗೆ ಪರಮ ಪವಿತ್ರವಾದ ದಿನ. ಕಪಿಲವಸ್ತು ಎಂಬಲ್ಲಿ ಶುದ್ಧೋದನನೆಂಬ ಶಾಕ್ಯರಾಜನು ರಾಜ್ಯವಾಳುತ್ತಿದ್ದನು. ಅವನಿಗೆ ಮಾಯಾದೇವಿಯೆಂಬ ರಾಣಿಯಿದ್ದಳು. ಒಮ್ಮೆ ಆರು ದಂತಗಳುಳ್ಳ ತುಷಿತ ಎಂಬ ಸ್ವರ್ಗಲೋಕದ ಶ್ವೇತವರ್ಣದ ಆನೆಯು ಆಕೆಯ ಗರ್ಭವನ್ನು ಪ್ರವೇಶಿಸಿದಂತೆ ಆಕೆಗೆ ಭಾಸವಾಯಿತು. ತಿಂಗಳು ತುಂಬಿದಾಗ ಆಕೆ ತನ್ನ ತವರಿಗೆ ಹೋಗಲು ಅನುಮತಿ ಬೇಡಿ, ಅಂತಃಪುರದ ದಾಸಿಯರೊಂದಿಗೆ ಹೋಗುತ್ತಿರುವಾಗ ಮಾರ್ಗದಲ್ಲಿ ಅವಳಿಗೆ ಹೆರಿಗೆ ನೋವು ಕಾಣಿಸಿಕೊಂಡು, ಲುಂಬಿನಿ ಎಂಬ ಸುಂದರ ಉದ್ಯಾನವನದಲ್ಲಿ ಶಿಶುವನ್ನು ಹೆತ್ತಳು. ಹೀಗೆ, ಕ್ರಿ.ಪೂ. ೫೬೩ ರಲ್ಲಿ ಸಿದ್ಧಾರ್ಥನ ಜನನವಾಯಿತು. ಸಂಸಾರದ ಜನನ–ಜರಾ–ವ್ಯಾಧಿ–ಮರಣಗಳೆಂಬ ಚಕ್ರಕ್ಕೆ ಸಿಕ್ಕಿದ ಮನುಷ್ಯನ ಶೋಚನೀಯ ಸ್ಥಿತಿಯನ್ನು ಕಂಡು ಕರುಣೆಯಿಂದ ಮರುಗಿ, ಶಾಶ್ವತವಾದ ಆನಂದದ ಅನ್ವೇಷಣೆಯಲ್ಲಿ ಸಕಲ ಭೋಗ–ಭಾಗ್ಯಗಳನ್ನು ತ್ಯಜಿಸಿ ಬುದ್ಧಗಯೆಯ ಬೋಧಿವೃಕ್ಷದಡಿಯಲ್ಲಿ ತಪಸ್ಸು ಮಾಡಿ, ಮಾರನನ್ನು ಜಯಿಸಿ, ಸಿದ್ಧಾರ್ಥನು ನಿರ್ವಾಣವನ್ನು ಪಡೆದು ಬುದ್ಧನಾದನು. ಆಗ ಅವನಿಗೆ ಕೇವಲ ೩೫ ವರ್ಷ.  ಬುದ್ಧನು ತಾನು ಕಂಡುಕೊಂಡ ಸತ್ಯವನ್ನು ಸಾರುವ ಉದ್ದೇಶದಿಂದ ದೇಶದ ವಿವಿಧೆಡೆ ಸಂಚರಿಸುತ್ತ ಸಾಮಾನ್ಯ ಜನರಿಗೆ ಅವರದ್ದೇ ಆದ ಭಾಷೆಯಲ್ಲಿ ಬೋಧಿಸಲು ತನ್ನ ಶಿಷ್ಯರ ದೊಡ್ಡ ಪಡೆಯನ್ನೇ ಸಂಘದ ರೂಪದಲ್ಲಿ ನಿರ್ಮಿಸಿದನು. ನಂತರ ತನ್ನ ೮೦ ನೇಯ ವರ್ಷದಲ್ಲಿ ಅಂದರೆ ಕ್ರಿ.ಪೂ. ೪೮೩ ರಲ್ಲಿ, ವೈಶಾಖ ಪೂರ್ಣಿಮೆಯ ದಿನದಂದು  ಕುಶೀನಗರವೆಂಬಲ್ಲಿ ಮಹಾಪರಿನಿರ್ವಾಣವನ್ನು ಹೊಂದಿದನು.